# ಕರ್ನಾಟಕ ವಿಧಾನ ಪರಿಷತ್ತು

## ಶೂನ್ಯ ವೇಳೆ

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಚಿದಾನಂದ್ ಎಂ ಗೌಡ (ಆಗ್ನೇಯ ಪದವೀಧರ ಕ್ಷೇತ್ರ), ಇವರು ಶೂನ್ಯವೇಳೆಯಲ್ಲಿ, ಹೆರಿಗೆ ಎಂಬುದು ಮಗುವಿಗೆ ಜನ್ಮ, ತಾಯಿಗೆ ಪುನರ್ಜನ್ಮ, ಮನೆಗೆ ಪುಟ್ಟ ಕಂದಮ್ಮನ ಆಗಮನ ಇಡೀ ಕುಟುಂಬಕ್ಕೆ ಸಂತಸದ ಕ್ಷಣ. ಆದರೆ, ಇಂದು ಮಗುವಿನ ಜನ್ಮವನ್ನು, ತಾಯಿ ಮತ್ತು ಕುಟುಂಬಕ್ಕಿಂತ ಹೆಚ್ಚು ಸಂಭ್ರಮಿಸುತ್ತಿರುವುದು ಆಸ್ಪತ್ರೆಗಳು. ಆಸ್ಪತ್ರೆಗಳಲ್ಲಿ ಹಣದ ವ್ಯಾಮೋಹ ಹೆಚ್ಚುತ್ತಿದ್ದು, ಇದರ ಪರಿಣಾಮವಾಗಿ ಸಿಸೇರಿಯನ್ ಮಾಯೆ ಎಲ್ಲೆಡೆ ಆವರಿಸುತ್ತಿದೆ. ತುಮಕೂರು ಜಿಲ್ಲೆ ಇದರಲ್ಲಿ ಮುಂಚೂಣಿಯಲ್ಲಿದೆ. ತುಮಕೂರು ಜಿಲ್ಲೆಯ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆ ಮಾಯವಾಗಿದ್ದು, ಸಿಸೇರಿಯನ್ ಹೆರಿಗೆಗಳು ಹೆಚ್ಚಾಗುತ್ತಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಭವಿಸಿದ ಬಾಣಂತಿಯರ ಸಾವಿನಿಂದ ಆತಂಕಗೊಂಡಿರುವ ಜನತೆ, ಹೆರಿಗೆ ಎಂದರೆ ಸಾಕು, ಎಷ್ಟೇ ಹಣ ವೆಚ್ಚವಾದರೂ ಸರಿ, ತಾಯಿ-ಮಗು ಬದುಕಿದರೆ ಸಾಕು ಎನ್ನುವ ತೀರ್ಮಾನಕ್ಕೆ ಜನತೆ ಬರುತ್ತಾರೆ. ಕುಟುಂಬದವರ ಭಯವನ್ನೇ ಕೆಲವು ಆಸ್ಪತ್ರೆಯವರು ಹಣ ಮಾಡುವ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ಬಡವರ ಪಾಲಿಗೆ ಇದು ಬಿಸಿ ತುಪ್ಪವಾಗಿದೆ. ಏಪ್ರಿಲ್ 2024 ರಿಂದ ಜನವರಿ 2025ರ ವರೆಗೆ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿನ ಹೆರಿಗೆಗಳ ವಿವರ ಈ ಕೆಳಗಿನಂತಿದೆ.

| ತಾಲ್ಲೂಕು | ಸಹಜ (ಖಾಸಗಿ ಆಸ್ಪತ್ರೆ) | ಸಿಸೇರಿಯನ್ | ಸಹಜ (ಸರ್ಕಾರಿ ಆಸ್ಪತ್ರೆ) | ಸಿಸೇರಿಯನ್ |
|---|---|---|---|---|
| ಚಿ.ನಾ.ಹಳ್ಳಿ | 54 | 31 | 170 | 89 |
| ಗುಬ್ಬಿ | 603 | 451 | 661 | 381 |
| ಕೊರಟಗೆರೆ | 94 | 72 | 599 | 385 |
| ಕುಣಿಗಲ್ | 424 | 240 | 721 | 481 |
| ಮಧುಗಿರಿ | 716 | 617 | 159 | 93 |
| ಪಾವಗಡ | 1,663 | 1,353 | 993 | 524 |
| ಶಿರಾ | 841 | 714 | 3015 | 1,585 |
| ತಿಪಟೂರು | 1,525 | 1169 | 1,683 | 989 |
| ತುಮಕೂರು | 5,852 | 4,763 | 3,424 | 2,195 |
| ತುರುವೇಕೆರೆ | 107 | 100 | 61 | 30 |
| **ಒಟ್ಟು** | **11,879** | **9,510** | **11,486** | **6,752** |

ಆಸ್ಪತ್ರೆಗಳು ಮೊದಲು ಸಹಜ ಹೆರಿಗೆಗೆ ಆದ್ಯತೆ ನೀಡಬೇಕು, ತಾಯಿ ಮಗುವಿನ ಆರೋಗ್ಯದ ಕುಂಟು ನೆಪದಲ್ಲಿ ಗರ್ಭಿಣಿಯರಿಗೆ ಮತ್ತು ಅವರ ಕುಟುಂಬದವರಿಗೆ ಆತಂಕ ಮೂಡಿಸಿ, ಸಹಜ ಹೆರಿಗೆ ಲಕ್ಷಣಗಳಿದ್ದರೂ ಸಿಸೇರಿಯನ್ ಹೆರಿಗೆ ನೆಪದಲ್ಲಿ ಆಸ್ಪತ್ರೆಗಳು ಹಣ ಮಾಡುವ ಮಾರ್ಗ ಮಾಡಿಕೊಂಡಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಕಠಿಣ ಕಾನೂನು ಜಾರಿಗೊಳಿಸಬೇಕೆಂದು ಈ ವಿಷಯದ ಕುರಿತು ವಿಶ್ವವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯ ನಕಲನ್ನು ಲಗತ್ತಿಸಿ, ಪ್ರಸ್ತಾಪಿಸಿರುವ ಬಗ್ಗೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

ತುಮಕೂರು ಜಿಲ್ಲೆಯಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಮತ್ತು ಸಹಜ ಹೆರಿಗೆಗಳು ಜರುಗುತ್ತಿವೆ. ಆದರೆ ಅನಗತ್ಯ ಸಿಸೇರಿಯನ್ ನೆರವೇರಿಸಿರುವ ಬಗ್ಗೆ, ಯಾವುದೇ ದೂರುಗಳು ಬಂದಿರುವುದಿಲ್ಲ. ದೂರುಗಳು ಬಂದಿದಲ್ಲಿ, ಎಲ್ಲಾ ಜಿಲ್ಲಾ ಮಟ್ಟದ KPME ಸಮಿತಿಯು KPME ಕಾಯ್ದೆಯ

ಸೆಕ್ಷನ್ 11 ರಡಿಯಲ್ಲಿ ನೋಟಿಸ್ ಜಾರಿ ಮಾಡಿ, ಮುಂದಿನ ಕ್ರಮಕೈಗೊಳ್ಳಲು ಅವಕಾಶವಿರುತ್ತದೆ., ತುಮಕೂರು ಜಿಲ್ಲೆಯಲ್ಲಿ ಏಪ್ರಿಲ್-2024 ರಿಂದ ಜನವರಿ-2025 ರ ವರೆಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಜರುಗಿದ ಸಹಜ ಮತ್ತು ಸಿಸೇರಿಯನ್ ಹೆರಿಗೆಗಳ ಅಂಕಿ ಅಂಶಗಳು ಕೆಳಗಿನಂತಿರುತ್ತವೆ:-

| ತುಮಕೂರು ಜಿಲ್ಲೆಯ ಸರ್ಕಾರಿ ಮತ್ತು ಖಾಸಗಿ ಆಸಪತ್ರೆಗಳಲ್ಲಿ ನೆರವೇರಿದ ಹೆರಿಗೆಗಳ ವಿವರ ಏಪ್ರಿಲ್-2024 ರಿಂದ ಜನವರಿ-2025 ರವರೆಗೆ (Source H.M.I.S. Portal) | | | | | | | |
|---|---|---|---|---|---|---|---|
| ಕ್ರಮ ಸಂಖ್ಯೆ | ತಾಲ್ಲೂಕು | ಸರ್ಕಾರಿ | | | ಖಾಸಗಿ | | |
| | | ಸಹಜ | ಸಿಸೇರಿಯನ್ | ಒಟ್ಟು | ಸಹಜ | ಸಿಸೇರಿಯನ್ | ಒಟ್ಟು |
| 1 | ಚಿಕ್ಕನಾಯಕನಹಳ್ಳಿ | 156 | 89 | 245 | 23 | 31 | 54 |
| 2 | ಗುಬ್ಬಿ | 311 | 381 | 692 | 152 | 451 | 603 |
| 3 | ಕೊರಟಗೆರೆ | 253 | 385 | 638 | 22 | 72 | 94 |
| 4 | ಕುಣಿಗಲ್ | 280 | 481 | 761 | 234 | 342 | 576 |
| 5 | ಮಧುಗಿರಿ | 243 | 93 | 336 | 99 | 617 | 716 |
| 6 | ಪಾವಗಡ | 538 | 524 | 1062 | 310 | 1353 | 1663 |
| 7 | ಶಿರಾ | 1672 | 1585 | 3257 | 131 | 730 | 861 |
| 8 | ತಿಪಟೂರು | 707 | 989 | 1696 | 356 | 1169 | 1525 |
| 9 | ತುಮಕೂರು | 1257 | 2195 | 3452 | 1089 | 4763 | 5852 |
| 10 | ತುರುವೇಕೆರೆ | 67 | 30 | 97 | 7 | 100 | 107 |
| | Total | 5484 | 6752 | 12236 | 2423 | 9628 | 12051 |

**ಅನಗತ್ಯ ಸಿಸೇರಿಯನ್ ಶಸ್ತ್ರಚಿಕಿತ್ಸೆಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-**

1. ಪ್ರತಿ ತಿಂಗಳು ಎಲ್ಲಾ ಜಿಲ್ಲೆಗಳಲ್ಲಿ, ಆಸ್ಪತ್ರೆಯ ಮಟ್ಟದಲ್ಲಿ ಪ್ರತಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಬಗ್ಗೆ ಕಡ್ಡಾಯವಾಗಿ ಸಿಸೇರಿಯನ್ ಆಡಿಟ್ ಮಾಡಲು ಸಂಬಂಧಿಸಿದ ನಮೂನೆಗಳೊಂದಿಗೆ ಸೂಚನೆ ನೀಡಲಾಗಿದೆ.
2. ತಾಯಿ ಕಾರ್ಡನಲ್ಲಿ ಸಾಮಾನ್ಯ ಹೆರಿಗೆಯ ಲಾಭಗಳ ಕುರಿತು ವಿಶೇಶ ಮಾಹಿತಿ ಸೇರಿಸಿ, ಮುಂಚೂಣಿ ಕಾರ್ಯಕರ್ತರ ಮೂಲಕ ಸಾಮಾನ್ಯ ಹೆರಿಗೆಗಳನ್ನು ಉತ್ತೇಜಿಸಲು ಮಾಹಿತಿ ನೀಡಲಾಗುತ್ತಿದೆ.
3. ಸಿಸೇರಿಯನ್ ಹೆರಿಗೆ ಮಾಡಲು ಪಾಲಿಸಬೇಕಾದ ಕ್ಲಿನಿಕಲ್ ಸ್ಥಿತಿಗಳ ಬಗ್ಗೆ (Robson Criteria ಕುರಿತು) ಸ್ತ್ರೀ ರೋಗ ತಜ್ಞರು ಮತ್ತು ಅರವಳಿಕೆ ತಜ್ಞರಿಗೆ ತರಬೇತಿಯನ್ನುನೀಡಲಾಗಿದೆ.
4. ಲಕ್ಷ್ಯ ಕಾಯರ್ಕ್ರಮದಡಿಯಲ್ಲಿ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಪ್ರಾಮಾಣೀಕರಣಗೊಳಿಸಲಾಗುತ್ತಿದ್ದು, ಲಕ್ಷ್ಯ ಚೆಕ್‌ಲಿಸ್ಟ್‌ನಲ್ಲಿ ಸಿಜೇರಿಯನ್ ಹೆರಿಗೆ ಮಾಡಲು indications ಇದ್ದರೆ ಮಾತ್ರ, ಸಿಜೇರಿಯನ್ ಹೆರಿಗೆಗಳನ್ನು ಮಾಡುವುದರ ಅಂಶವನ್ನು ಒಳಗೊಂಡಿರುತ್ತದೆ.
5. ಹೆರಿಗೆ ಸಮಯದಲ್ಲಿ ಉಪಯೋಗಿಸುವ ಒಪ್ಪಿಗೆ ನಮೂನೆ (consent form) ಯಲ್ಲಿ ಸಿಸೇರಿಯನ್ ನಿಂದ ಉಂಟಾಗುವ ಅಡ್ಡಪರಿಣಾಮಗಳ ಬಗ್ಗೆ ತಿಳಿಸಲಾಗಿದೆ.
6. ಮೊದಲ ಸಿಸೇರಿಯನ್ ಹೆರಿಗೆ ಆದ ಮಹಿಳೆಯರಿಗೆ, ನಂತರದ ಸಹಜ ಹೆರಿಗೆಗಳನ್ನು ನೆರವೇರಿಸುವ ಬಗ್ಗೆ ತರಬೇತಿಯನ್ನು ನೀಡಲಾಗಿದೆ.
7. ಮಿಡ್ ವೈಫರಿ ತರಬೇತಿಯನ್ನು ಶುಶ್ರೂಷಕಾಧಿಕಾರಿಗಳಿಗೆ ನೀಡಲಾಗುತ್ತಿದೆ. ಈಗಾಗಲೇ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ; ಮೈಸೂರಿನ ಚೆಲುವಾಂಬ ಆಸ್ಪತ್ರೆ ಹಾಗೂ ಬೆಳಗಾವಿಯ ಜಿಲ್ಲಾ ಆಸ್ಪತ್ರೆಯಲ್ಲಿ ತರಬೇತಿಯು ಪ್ರಾರಂಭವಾಗಿದ್ದು ಇದರಿಂದ ಸಹಜ ಹೆರಿಗೆಗಳು ಹೆಚ್ಚಾಗಲಿದ್ದು, ಅನಗತ್ಯ ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಕಡಿವಾಣ ಆಗಲಿದೆ.
8. ಪ್ರತಿ ತಾಲ್ಲೂಕು ಆಸ್ಪತ್ರೆಗಳಿಂದ ಜಿಲ್ಲಾ ಆಸ್ಪತ್ರೆಗಳಿಗೆ ಅನಗತ್ಯ ರೆಫರಲ್‌ಗೆ ಕಡಿವಾಣ ಹಾಕಲು ಮತ್ತು 24X7 ತಾಲ್ಲೂಕು ಆಸ್ಪತ್ರೆಗಳಲ್ಲಿ ಸಮಗ್ರ ಹೆರಿಗೆ ಸೇವೆಗಳನ್ನು ನೀಡಲು ಅನುವು ಆಗುವಂತೆ ಕನಿಷ್ಠ ಇಬ್ಬರು ಸ್ತ್ರೀ ರೋಗ ತಜ್ಞರು; ಇಬ್ಬರು ಅರವಳಿಕೆ ತಜ್ಞರು ಮತ್ತು ಒಬ್ಬರು ಮಕ್ಕಳ ತಜ್ಞರನ್ನು ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
9. ತಾಲ್ಲೂಕು ಆಸ್ಪತ್ರೆ ಹಾಗು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ MCH ತಜ್ಞರಿಗೆ ಮತ್ತು ಶುಶ್ರೂಷಕಾಧಿಕಾರಿಗಳಿಗೆ ಮಾರ್ಗದರ್ಶನವನ್ನು ಜಿಲ್ಲಾ ಸರ್ಕಾರಿ ವೈದ್ಯಕೀಯ ಆಸ್ಪತ್ರೆ ತಜ್ಞರಿಂದ ನೀಡಲಾಗುವುದು.

10. ತುಮಕೂರು ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಯ ಮುಖ್ಯಸ್ತರು ಹಾಗೂ ವೈದ್ಯರುಗಳನ್ನೊಳಗೊಂಡಂತೆ ವಾಟ್ಸ್ ಅಪ್ ಗುಂಪು ರಚಿಸಲಾಗಿದ್ದು, ಇದರಲ್ಲಿ ಗಂಡಾಂತರ ಗರ್ಭಿಣಿಯರ ರೆಫರ್ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡಲು ಸೂಚಿಸಲಾಗಿದೆ.
11. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ತಾಯಿ ಮರಣ ಮತ್ತು ಶಿಶು ಮರಣ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಸ್ತ್ರಚಿಕಿತ್ಸಾ ಹೆರಿಗೆಗಳನ್ನು ಕಡಿಮೆ ಮಾಡಲು ಕಟ್ಟುನಿಟ್ಟಾಗಿ ಸೂಚಿಸಲಾಗಿರುತ್ತದೆ.
12. ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಹೆರಿಗೆಗಳ ಆಡಿಟನ್ನು ಕಡ್ಡಾಯವಾಗಿ ಮಾಡಲಾಗಿರುತ್ತದೆ.
13. ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಗರ್ಭಿಣಿಯರನ್ನು ಆರ್.ಸಿ.ಹೆಚ್. ತಂತ್ರಾಂಶದಲ್ಲಿ ಫಾಲೋ ಅಪ್ ಎಂಟ್ರಿ ಮಾಡಲು ಕಟ್ಟುನಿಟ್ಟಾಗಿ ಸೂಚಿಸಲಾಗಿರುತ್ತದೆ

**ಸಂಖ್ಯೆ: ಆಕುಕ 48 ಎಸ್‌ಟಿಕ್ಯೂ 2025.**

**( ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಸಚಿವರು.